

# ದ್ರೋಸೇರಾ

■ ಸುನೀಲ ಬಾರ್ಕೂರ
ಚಿತ್ರ: ಗೋಪಾಲ ಬಾರ್ಕೂರ

ಸಸ್ಯವೆಂಬ ಪದದ ಅರ್ಥವನ್ನೇ ಉಲ್ಟಾ ಮಾಡುವ ಈ ಪ್ರಭೇಧ ಅಪ್ಪಟ ಮಾಂಸಾಹಾರಿ! ಅರ್ಥಾತ್ ಮಾಂಸಾಹಾರಿ ಸಸ್ಯ. ಇವುಗಳ ಪೈಕಿ ಭಾರತದಲ್ಲಿ ಮುಖ್ಯವಾಗಿ ನಾಲ್ಕು ಪ್ರಭೇಧಗಳಿವೆ. ನೆಪೆಂಥಸ, ಉಟ್ರಿಕುಲಾರಿಯಾ, ಪಿಂಗ್ವಿಕುಲ ಮತ್ತು ದ್ರೋಸೇರಾ. ದ್ರೊಸೇರಾದಲ್ಲಿ ಹೆಚ್ಚಾಗಿ ಕಂಡುಬರುವ ಪ್ರಮುಖ ಉಪಜಾತಿಗಳಲ್ಲಿ ದ್ರೊಸೇರ ಇಂಡಿಕಾ ಮತ್ತು ದ್ರೋಸೇರ ಬರ್ಮಾನಿ ಮುಖ್ಯವಾದವು.

ಈ ಸಸ್ಯವನ್ನು ಕನ್ನಡದಲ್ಲಿ ಕೀಟಹಿಡುಕ, ಕದೀರಪನಿ ಸಸ್ಯ ಎಂದು ಕರೆಯುತ್ತಾರೆ. ಇವುಗಳಲ್ಲಿ ಸುಮಾರು 194 ಪ್ರಜಾತಿಗಳಿದ್ದು ಬಂಡೆ, ಜವಳು ಪ್ರದೇಶ ಹೀಗೆ ಸತ್ವರಹಿತ ಮಣ್ಣು ಇರುವ ಜಾಗ ಇವುಗಳ ಪ್ರಮುಖ ವಾಸಸ್ಥಾನ. ತಮ್ಮ ಬದುಕಿಗಾಗಿ ಕೀಟ, ನೊಣಗಳೇ ಇವುಗಳಿಗೆ ಆಹಾರ.

ಉದ್ದ ನಾಲಿಗೆಯಂತಹ ತಮ್ಮ ಎಲೆಗಳನ್ನು ಚಾಚಿ ಇವುಗಳು ಮಿಕಗಳಿಗೆ ಆಹ್ವಾನನೀಯುತ್ತವೆ. ಈ ಎಲೆಗಳ ಮೇಲೆ ಸಿಹಿಯಾದ ದ್ರಾವಣ ಹರಡಿರುವುದರಿಂದ ಸಹಜವಾಗಿ ಆಕರ್ಷಿತವಾಗುವ ಚಿಕ್ಕ ನೊಣಗಳು ಈ ಜಾಲ ಅರ್ಥವಾಗುವ ಮುನ್ನವೇ ಮಡಚಿಕೊಳ್ಳುವ ಸಸ್ಯದ ಮೂಲಕ ಬಂಧನದಲ್ಲಿ ಸೇರಿರುತ್ತವೆ. ಹೀಗೆ ಬಂಧಿಯಾಗುವ ಕೀಟಗಳು ಈ ದ್ರಾವಣದಲ್ಲಿ ಉಸಿರುಗಟ್ಟಿ ಸಾಯುತ್ತವೆ. ಸಸ್ಯವು ಇವುಗಳನ್ನು ಅದೇ ದ್ರಾವಣದಲ್ಲಿ ಕರಗಿಸಿ ತನ್ನ ಎಲೆಗಳ ಮೇಲಿರುವ ಗ್ರಂಥಿಗಳಿಂದ ಸೇವಿಸುತ್ತದೆ.



ಯಾವತ್ತೂ ಇದರ ಮೈಮೇಲಿರುವ ದ್ರಾವಣ ಮಂಜಿನ ಹನಿಗಳಂತೆ ಕಾಣುವುದರಿಂದ ಸಸ್ಯಕ್ಕೆ ಈ ಹೆಸರು ಬಂದಿದೆ. ಚಾಚಿಕೊಂಡಿರುವ ಎಲೆಗಳಲ್ಲಿ ಕೀಟದ ಕಾಲು ಅಥವಾ ದೇಹದ ಭಾಗವು ಅಂಟಿಕೊಂಡಿದ್ದರೂ ಸಾಕು, ಎಲೆಗಳು ವೇಗದ ಚಲನೆಯಿಂದ ಕೀಟಗಳನ್ನು ಬಂಧಿಸುತ್ತವೆ.

ಸಸ್ಯದ ಕೆಲವು ಉಪಪ್ರಭೇಧಗಳಲ್ಲಿ ಈ ವೇಗವು ಮಿಲಿ ಸೆಕೆಂಡಿನಷ್ಟು ತೀವ್ರವಾಗಿರುತ್ತದೆ. 1ರಿಂದ 100 ಸೆಂ.ಮಿ.ನಷ್ಟು ಉದ್ದ ಬೆಳೆಯುವ ದ್ರೋಸೇರಾ, ಭೂಖಂಡದ ಎಲ್ಲೆಡೆ ಕಾಣಸಿಗುತ್ತದೆ.

ದ್ರೋಸೇರಾಗೆ ಔಷಧೀಯ ಗುಣಗಳಿದ್ದು ಕಫ, ಶ್ವಾಸಕೋಶ ಸಂಬಂಧಿ ಕಾಯಿಲೆಗಳಿಗೆ ಮದ್ದಾಗಿ ಬಳಸಲಾಗುತ್ತದೆ. ಮೈಮೇಲಿನ ದ್ರಾವಣದಿಂದ ಆಕರ್ಷಕವಾಗಿ ಕಾಣುವುದರಿಂದ ಅಲಂಕಾರಿಕ ಸಸ್ಯವಾಗಿಯೂ ಇದಕ್ಕೆ ಬಹುಬೇಡಿಕೆ ಇದೆ.

